**ದಿನಾಂಕ 24.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ: ಶ್ರೀ. ಕೆ.ವಿ.ಎಂ. ವಕೀಲರಿಂದಃ–**

7 ನೇ ಪ್ರತಿವಾದಿಯು ನನ್ನ ತಂದೆಯ ವಿರುದ್ಧ ಕಡೂರಿನ 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂ.24/2019 ರಂತೆ ದಾವಾ ಐಟಂ ನಂ.1 ಕ್ಕೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ 7 ನೇ ಪ್ರತಿವಾದಿಯ ಸ್ವಾಧೀನಾನುಭವಕ್ಕೆ ಧಕ್ಕೆ ತರಬಾರದು ಎಂದು ಶಾಶ್ವತ ನಿರ್ಬಂದಕಾಜ್ಞೆ ಕೋರಿ ನನ್ನ ತಂದೆಯ ವಿರುದ್ಧ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ 7 ನೇ ಪ್ರತಿವಾದಿಯು ನನ್ನ ತಂದೆಯ ವಿರುದ್ಧ ತಾತ್ಕಾಲಿಕ ನಿರ್ಬಂದಕಾಜ್ಞೆ ಆದೇಶವನ್ನು ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ತಾತ್ಕಾಲಿಕ ನಿರ್ಬಂದಕಾಜ್ಞೆ ಆದೇಶದ ವಿರುದ್ಧ ನನ್ನ ತಂದೆಯವರು ಕಡೂರಿನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಎಂ.ಎ ನಂ.5/2019 ರಂತೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಗೆ ನನ್ನ ತಂದೆಯು ಹಾಜರಾಗದೇ ಇದ್ದುದ್ದರಿಂದ ದಿನಾಂಕ 31.08.2024 ರಂದು ಸದರಿ ಅರ್ಜಿಯು ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಐಟಂ ನಂ.1 ಅಂದರೆ ಸರ್ವೆ ನಂ.261/4 ರಲ್ಲಿ 01 ಎಕರೆ 10 ಗುಂಟೆಯನ್ನು ನನ್ನ ತಂದೆಯವರು 2002 ರಲ್ಲಿ ನಮ್ಮ ಕುಟುಂಬದ ಅವಶ್ಯಕತೆಗಳಿಗೋಸ್ಕರ ವೆಂಟಕರಾಮು ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವೆಂಟಕರಾಮುರವರು ನಂತರ ಸದರಿ ಸ್ವತ್ತನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು ಅದನ್ನು ಇದುವರೆಗು ನನ್ನ ತಂದೆಯವರಾಗಲಿ, ನಾನಾಗಲಿ ನಿಗಧಿತ ಅವಧಿಯೊಳಗೆ ಪ್ರಶ್ನಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ವೆಂಟಕರಾಮುರವರಿಗೆ ನನ್ನ ತಂದೆಯವರು ದಾವಾ ಐಟಂ ನಂ.1 ರಲ್ಲಿ 01 ಎಕರೆ 10 ಗುಂಟೆಯನ್ನು ದಾವಾ ಹಾಕುವ ಕಾಲಕ್ಕೆ 16 ವರ್ಷಗಳು ಕಳೆದರೂ ಸಹ ಸದರಿ ಕ್ರಯ ಪತ್ರವನ್ನು ಪ್ರಶ್ನಿಸದೆ 7 ನೇ ಪ್ರತಿವಾದಿಯ ವಿರುದ್ಧ ಉದ್ದೇಶಪೂರ್ಕವಾಗಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

(**1 ಮತ್ತು 2 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು**)

O.S.No.477/2018
PW.1

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು ಕಡೂರು.